# ಹರಿ ಹರಿ ನಿನ್ನನು ಒಲಿಸಲು ಬಹುದು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Note:** There are other versions available in the social media. Some are complete and some are not complete. They are so many similar wordings but are grossly different.
3. **Note:** Singer has followed slightly different lyrics. I don't have the reference book he has taken. He has not followed the lyrics given here. But the available song is uploaded for the reference of the viewers.

ರಾಗ: ಬಿಲಹರಿ ತಾಳ: ಅಟ್ಟ

ಹರಿ ಹರಿ ನಿನ್ನನು ಒಲಿಸಲು ಬಹುದು
ನರಜನರೊಲಿಸೊದು ಬಲು ಕಷ್ಟ ॥ ಪ ॥

ಸರಿ ಬಂದಂತೆ ಆಡುವ ಜನರಿಗೆ
ಕಡೆತನಕಿರುವುದು ಕಲಿ ಕಷ್ಟ ॥ ಅಪ ॥

ಸುಮ್ಮನೆ ಇದ್ದರೆ ಸೇರರು ಸಖರು, ಗಮ್ಮನಾತನೆಂತೆಂಬೊರು
ಉನ್ನಯದಿಂದ ಬಹಳನ್ನವನುಂಡರೆ ಭೂತ ಪ್ರಾಣಿ ಇವನೆಂಬೊರು
ಕಮ್ಮ್ಯುಂಡರೆ ಕಡು ಲೋಭಿಯೆಂಬೊರು, ಉಣದಿದ್ದರೆ ರೋಗ್ಯೆಂಬುವರಯ್ಯ ॥ 1 ॥

ಸುಮ್ಮನೆ ಇದ್ದರೆ ಬಹಳ ಗುರವಿಕೆ ಆತಗೆಂಬರು
ಹೊರ ಬಿಚ್ಚಾಡಲು ಬಾಯಿ ಬಡಕನೆಂಬರು
ಆಡದಿದ್ದರೆ ಮೂಕನೆಂಬರಯ್ಯ ॥ ೨ ॥

ಒಗೆದ ವಸ್ತ್ರವನು ಶುದ್ಧಾಗಿ ಹೊದ್ದರೆ
ಸುಳು ಶೋಕಿನವನಿವನೆಂಬರು

ನಗೆ ಮಾಸಿದರೆ ಹೇಸಿಯೆಂಬರು
ಹೊದಿಯದಿದ್ದರೆ ಹುಚ್ಚನೆಂಬರಯ್ಯ     ॥ ೩ ॥

ಸತಿಯಾಳ ಸಂಗದಿ ಸೌಖ್ಯವಿದ್ದರೆ
ಸಲಿಗೆ ಕೊಟ್ಟ ಕೋತ್ಯೆಂಬರು
ವ್ರತದ ನಾರೇರ ಸಂಗವ ಬಿಟ್ಟರೆ ನಪುಂಸಕನೆಂತೆಂಬರು
ಅರಿಯದಿದ್ದರೆ ದಡ್ಡನೆಂಬರಯ್ಯ     ॥ ೪ ॥

ದಡಬಡಿ ಇದ್ದರೆ ಠೊಣ್ಯನೆಂಬರು
ತೆಳುವಿದ್ದರೆ ರೋಗಿಷ್ಟನೆಂಬರು
ಗಳಿಸಿ ಗಳಿಸಿ ಧನವಂತನಾದರೆ
ಪರರ ಒಡವೆ ಕೈ ಸೇರಿತೆಂಬರು
ಕಡೆ ಹಾಯಿಸೊ ಎನ್ನ ಕಠಿಣ ಪಂಢರ-ಪುರ
ದೊಡೆಯ ಶ್ರೀ ಪುರಂದರ ವಿಠ್ಠಲ ಕಡೆದೋರ್‍ಯೆ     ॥ ೫ ॥

**Classification:** Keerthane
**Ankita:** sri purandara vittala
**Location:** NA
**Category:** Jeevanoddhara, Artha Bhava
**Sub-Category:** Krishna, jana, olume, ATa, anna, oota, roga, garva, bayi, sullu, huchha, sukha, patni, koti, vrata, hengasu, kai, abharana,
**Pravachana:** NA
**Explanation:** NA